## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1062/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 04/10/2021

### ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಮೆಹಬೂಬ್ ಹುಸೇನ್ ತಂದೆ ಮಕ್ಬುಲ್, ಗ್ರಾಮ ಲೆಕ್ಕಾಧಿಕಾರಿ, ಬಾಗಲವಾಡ ಪ್ರಭಾರ ಮಲ್ಲದಗುಡ್ಡ ಗ್ರಾಮ ಪಂಚಾಯತ್, ತಾ: ಜಿ: ರಾಯಚೂರು ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

ರಾಯಚೂರು ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಮೆಹಬೂಬ್ ಹುಸೇನ್ ತಂದೆ ಮಕ್ಬುಲ್, ಗ್ರಾಮ ಲೆಕ್ಕಾಧಿಕಾರಿ, ಬಾಗಲವಾಡ ಪ್ರಭಾರ ಮಲ್ಲದಗುಡ್ಡ ಗ್ರಾಮ ಪಂಚಾಯತ್, ತಾ: ಜಿ: ರಾಯಚೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ಮಂಜುನಾಥ ತಂದೆ ನಾಗಪ್ಪ, ಸಾ: ಡೊಣಮರಡಿ, ತಾ: ಮಾನವಿ, ಜಿ: ರಾಯಚೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸವನ್ನು ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ

1984 ರ ಕಲಂ 7 (2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2. ದೂರಿನ ಸಂಕ್ಷಿಪ್ತ ಸಾರಾಂಶ:-

i. ದೂರುದಾರರ ತಾಯಿಯಾದ ಶ್ರೀಮತಿ ಲಕ್ಷ್ಮಿ ಕೋಂ ನಾಗಪ್ಪ ಡೊಣಮರಡಿ ಗ್ರಾಮ ಇವರಿಗೆ ವಾಲ್ಮೀಕಿ ಮಹರ್ಷಿ ಪರಿಶಿಷ್ಟ ನಿಗಮದಿಂದ ಜಮೀನು ಬರುತ್ತಾ ಇದೆ, ಅದನ್ನು ನಿಮಗೆ ಕೊಡಿಸುತ್ತೇವೆ ನೀವು ಅರ್ಜಿ ಹಾಕಿರಿ ಅಂತಾ ಶಾಸಕರಾದ ಶ್ರೀ ಪ್ರಸಾದಗೌಡ ಪಾಟೀಲರವರು ಹೇಳಿದ್ದು ಆದರೆ ಜಮೀನಿಗೆ ಅರ್ಜಿ ಹಾಕಬೇಕಾದರೆ ಕೃಷಿ ಕಾರ್ಮಿಕ ಪ್ರಮಾಣಪತ್ರ ಬೇಕಾಗಿದ್ದು ಅದರ ಸಲುವಾಗಿ ದೂರುದಾರರ ತಾಯಿಯು ದಿನಾಂಕ 02/11/2017 ರಂದು ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯು ಎದುರುದಾರರ ಹತ್ತಿರ ವಿಚಾರಣೆಗಾಗಿ ಬಂದಿದ್ದು ದಿನಾಂಕ 02/11/2017 ರಿಂದ 09/11/2017 ರ ಒಳಗೆ ಎದುರುದಾರರು ದೂರುದಾರರಿಗೆ ಸರ್ಟಿಫಿಕೇಟನ್ನು ಕೊಡಬೇಕಾಗಿದ್ದು ಆದರೆ ಕೊಟ್ಟಿರುವುದಿಲ್ಲ. ಹೀಗಾಗಿ ದೂರುದಾರರಿಗೆ ಎದುರುದಾರರ ಹತ್ತಿರ ತಿರುಗಿ ತಿರುಗಿ ಸಾಕಾಗಿ ಅವರು ದಿನಾಂಕ 17/11/2017 ರಂದು ಸಾಯಂಕಾಲ 5-00 ಘಂಟೆಗೆ ತಮ್ಮ ಸ್ನೇಹಿತರಾದ ರಾಮಚಂದ್ರಮೂರ್ತಿ ಹಾಗೂ ಶಿವಕುಮಾರ ರವರೊಂದಿಗೆ ಎದುರುದಾರರ ವಾಸದ ಹಾಗೂ ಆಫೀಸನ್ನು ಮಾಡಿಕೊಂಡ ಆಫೀಸಿನಲ್ಲಿ ಸರ್ಟಿಫಿಕೇಟನ್ನು ಕೊಡಲು ಕೇಳಿದಾಗ ಎದುರುದಾರರು ದೂರುದಾರರಿಗೆ ಅವರ ಗ್ರಾಮದ ಹಾಗೂ ಮಲ್ಲದಗುಡ್ಡ, ಮರ್ಕಂದಿನ್ನಿ ಗ್ರಾಮದ ಎಲ್ಲಾ ಫಲಾನುಭವಿಗಳಿಗೆ ತಲಾ 5,000/- ರೂ. ಹಣ ಕೊಡುವಂತೆ ಕೇಳಿದ್ದೇನೆ ಅಂತ ಅವರಿಗೆ ತಿಳಿಸಿದ್ದು, "ಆದರೆ ನಿನಗೆ ಮಾತ್ರ ಭೂಮಿ ಇದೆ ಅದಕ್ಕಾಗಿ 5,000/- ರೂ. ತಗೊಳ್ಳುವುದಿಲ್ಲ, ನೀನು 30,000/- ರೂ. ಕೊಡಬೇಕು, ಆಗ ಮಾತ್ರ ನಿನ್ನ ಕೆಲಸ ಮಾಡಿಕೊಡುತ್ತೇನೆ" ಅಂತಾ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಆಗ ದೂರುದಾರರು "ನಾನು ಬಡವ ದುಡ್ಕೊಂಡು ತಿನ್ನಾಕ ಬಂದವ್ನು, ಅಷ್ಟು ಹಣ ಇಲ್ಲ, ಈವಾಗ 5 ಸಾವಿರ ತಗೋ" ಅಂತ ಕೊಟ್ಟಿದ್ದು, ದೂರುದಾರರು ಎರಡು ತಿಂಗಳ ಹಿಂದೆ ನಿಮಗೆ 5 ಸಾವಿರ

ರೂಪಾಯಿಗಳನ್ನು ಕೊಟ್ಟಿದ್ದು ಹೀಗಾಗಿ ಉಳಿದ 20,000/- ರೂ.ಗಳನ್ನು ಎರಡು ದಿನಗಳೊಳಗಾಗಿ ಕೊಡುತ್ತೇನೆ ಅಂತ ಅವರು ಎದುರುದಾರರಿಗೆ ಹೇಳಿ ಬಂದಿರುತ್ತಾರೆ. ದೂರುದಾರರ ಜೊತೆ ಬಂದ ಸದರಿ ಗ್ರಾಮದ ವಿವಧ ಫಲಾನುಭವಿಗಳಾದ ವೆಂಕಟೇಶ, ಯಂಕಪ್ಪ, ತಿಮ್ಮಣ್ಣ, ಹನುಮಂತ, ಬಸವರಾಜು ಹಾಗೂ ಇತರರ ಕೃಷಿ ಕಾರ್ಮಿಕ ಸರ್ಟಿಫಿಕೇಟಗಳೂ ಸಹ ಎದುರುದಾರರಲ್ಲಿ ಇನ್ನೂ ಪೆಂಡಿಂಗ್ ಇರುತ್ತವೆ. ದೂರುದಾರರು ತಮ್ಮ ಕೆಲಸಕ್ಕೆ 5,000/- ರೂ.ಗಳನ್ನು ಕೊಟ್ಟ ಬಗ್ಗೆ ಮತ್ತು ಉಳಿದ ಹಣ 20,000/- ರೂ. ಗಳನ್ನು ಕೆಲಸ ಮಾಡಿಕೊಡಲು ಎದುರುದಾರರು ಬೇಡಿಕೆ ಇಟ್ಟಿದ್ದನ್ನು ದೂರುದಾರರು ತಮ್ಮ ಮೊಬೈಲ್ ಫೋನ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು ಇರುತ್ತದೆ.

ii. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 18/11/2017 ರಂದು ಮಧ್ಯಾಹ್ನ 12-00 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ರಾಯಚೂರು ಪೋಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರನ್ನು ಮತ್ತು ರೆಕಾರ್ಡ್ ಆಗಿರುವ ಸಂಭಾಷಣೆಯ ಮೊಬೈಲನ್ನು ಹಾಜರುಪಡಿಸಿದ್ದು ಅದಾದ ಮೇಲೆ ಸದರಿ ಪೋಲೀಸ್ ಠಾಣೆಯಲ್ಲಿ ಮೊ. ಸಂ. 03/2017 ಪಿ.ಸಿ. ಕಾಯಿದೆ ಕಲಂ 7 ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

iii. ನಂತರ ತನಿಖಾಧಿಕಾರಿಯವರು ದಿ: 18/11/2017 ರಂದು ಇಬ್ಬರು ಪಂಚರನ್ನು ಕರೆಯಿಸಿ ಪ್ರಾಯೋಗಿಕ ಪಂಚನಾಮೆ ಜರುಗಿಸುವ ಕಾಲಕ್ಕೆ ದೂರುದಾರರಿಗೆ ಸಂಭಾಷಣೆ ರೆಕಾರ್ಡ್ ಆದ ಮೊಬೈಲ್‌ನ್ನು ಹಾಜರುಪಡಿಸಲು ತಿಳಿಸಿದ ಮೇರೆಗೆ ದೂರುದಾರರು ತಮ್ಮ ಮೊಬೈಲ್‌ನ್ನು ಹಾಜರುಪಡಿಸಿದ್ದು ಆಗ ತನಿಖಾಧಿಕಾರಿಗಳು ಮೊಬೈಲ್‌ನಲ್ಲಿದ್ದ ಸಂಭಾಷಣೆಯನ್ನು ಲ್ಯಾಪ್‌ಟಾಪ್‌ಗೆ ವರ್ಗಾವಣೆ ಮಾಡಿ ಅದರಿಂದ ಎರಡು ಸಿ.ಡಿ. ಗಳನ್ನು ಮಾಡಿ ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ.

iv. ದಿನಾಂಕ 18/11/2017 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಮಾನವಿ ಪಟ್ಟಣದ ಬಸ್‌ಸ್ಟೆಂಡ್ ಹಿಂದಗಡೆ ಇರುವ ವಾರ್ಡ್ ನಂ. 7 ಜಿರಾಗಲಿ ಕಾಲನಿಯ ಖೂಬಾ ಮಸೀದಿ ಹಿಂದೆ ಇರುವ ಎದುರುದಾರರ ಆಫೀಸ್ ರೂಮಿನ ಹತ್ತಿರ ಬಂದು ತನಿಖಾಧಿಕಾರಿಗಳು ದೂರುದಾರರು ಹಾಗೂ ನೆರಳು ಸಾಕ್ಷಿಯಾದ ಶ್ರೀ ರತನ್‌ರಾಜ್‌ರವರನ್ನು ಎದುರುದಾರರ ಆಫೀಸಿಗೆ ಹೋಗಲು ತನಿಖಾಧಿಕಾರಿಗಳು ಸೂಚನೆ ನೀಡಿದಾಗ ಅವರಿಬ್ಬರೂ ಎದುರುದಾರರ ಆಫೀಸಿಗೆ ಹೋಗಿ ಮಾತನಾಡಿದಾಗ ಎದುರುದಾರರು ದೂರುದಾರರಿಂದ ಲಂಚದ ಹಣವಾದ ರೂ. 20,000/- ಗಳನ್ನು ಕೇಳಿ ಪಡೆದುಕೊಂಡು ತಮ್ಮ ಮುಂದೆ ಇದ್ದ ಟೇಬಲ್ ಡ್ರಾದ ಮೇಲ್ಭಾಗದಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ಎದುರುದಾರರ ರೂಮಿನಿಂದ ಹೊರಗೆ ಬಂದು ಅವರಿಗೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನೀಡಿದ ಸೂಚನೆಯಂತೆ ತಾನು ಕಟ್ಟಿಕೊಂಡಿರುವ ಲುಂಗಿಯನ್ನು ಕೆಳಗೆ ಬಿಡುವ ಮೂಲಕ ನಿಗದಿತ ಸಿಗ್ನಲ್ ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ಅಲ್ಲಿಗೆ ಬಂದು ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರ ಬಲಗೈಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳಿಸಲಾಗಿ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಅದೇ ರೀತಿ ಎಡಗೈಯನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳಿಸಲಾಗಿ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಈ ಬಗ್ಗೆ ನೆರಳು ಸಾಕ್ಷಿಯನ್ನು ಕೇಳಿದಾಗ ಅವರು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಾಗಿ ನುಡಿದಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಹಣ ಎಲ್ಲಿಟ್ಟಿರುತ್ತೀರಿ ಎಂದು ಕೇಳಿದಾಗ ಎದುರುದಾರರು ತಮ್ಮ ಮುಂದೆ ಇದ್ದ ಟೇಬಲ್‌ನ ಬಲಗಡೆ ಇರುವ ಡ್ರಾ ದ ಮೇಲ್ಭಾಗದಲ್ಲಿ ಇಟ್ಟಿರುವುದಾಗಿ ಹೇಳಿ ಡ್ರಾ ದಿಂದ ಲಂಚದ ಹಣ

20,000/- ರೂ.ಗಳನ್ನು ಹಾಜರುಪಡಿಸಿದ್ದನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಲಂಚದ ಹಣವನ್ನು ಜಪ್ತಿ ಮಾಡಿದ ಬಗ್ಗೆ ಸ್ವರಕ್ಷಣಾತ್ಮಕ ಹೇಳಿಕೆ ಬರೆದುಕೊಡಲು ತಿಳಿಸಿದ ಪ್ರಕಾರ ಅವರು ಅದರಲ್ಲಿ "ನಾನು ಅರ್ಜಿದಾರರಿಗೆ ಪ್ರಮಾಣಪತ್ರ ನೀಡಲು ಬರುವುದಿಲ್ಲ ಎಂದು ಹೇಳಿದ ಕಾರಣ ಮಂಜುನಾಥ ಎಂಬುವವರು ನನ್ನ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಮಾಡಿ ತಮ್ಮಲ್ಲಿ ದೂರು ನೀಡಿರುತ್ತಾರೆ. ನನ್ನದು ಯಾವುದೇ ತಪ್ಪಿಲ್ಲ. ದಿ: 18/11/2017 ರಂದು ದಿನನಿತ್ಯದ ಕೆಲಸವನ್ನು ಮಾಡುತ್ತಿರುವ ಸಮಯದಲ್ಲಿ ನನಗೆ ಅರಿವಿಲ್ಲದೆ ನನ್ನ ರೂಮಿನಲ್ಲಿ ಹಣವನ್ನು ಇಟ್ಟಿದ್ದು ಉದ್ದೇಶಪೂರ್ವಕವಾಗಿ ತಮ್ಮ ಗಮನಕ್ಕೆ ತಂದಿರುತ್ತಾರೆ. ನಾನು ಹಣವನ್ನು ತೆಗೆದುಕೊಂಡಿರುವುದಿಲ್ಲ" ಎಂದು ಬರೆದು ಕೊಟ್ಟ ಸಮಜಾಯಿಷಿಗೆ ಪಂಚರು ಹಾಗೂ ತನಿಖಾಧಿಕಾರಿಗಳು ಸಹಿ ಮಾಡಿ ತನಿಖಾಧಿಕಾರಿಗಳು ತಮ್ಮ ತಾಬಾಗೆ ತೆಗೆದುಕೊಂಡಿರುತ್ತಾರೆ. ಸದರಿ ಸ್ವರಕ್ಷಣಾತ್ಮಕ ಹೇಳಿಕೆಯನ್ನು ದೂರುದಾರರು ಹಾಗೂ ನೆರಳು ಸಾಕ್ಷಿದಾರರಿಗೆ ತೋರಿಸಿದಾಗ ಅವರು ಎದುರುದಾರರು ಬರೆದುಕೊಟ್ಟ ಹೇಳಿಕೆಯನ್ನು ಅಲ್ಲಗೆಳೆದು ಕೃಷಿ ಪ್ರಮಾಣಪತ್ರ ನೀಡಲು ಲಂಚದ ಹಣವನ್ನು ಕೇಳಿ ಪಡೆದಿರುತ್ತಾರೆ ಎಂದು ಸಮಜಾಯಿಷಿಯನ್ನು ಒಪ್ಪಿಕೊಂಡಿರುವುದಿಲ್ಲ. ತನಿಖಾಧಿಕಾರಿಗಳು ಎದುರುದಾರರಿಗೆ ಹಣ ಕೊಡುವ ಕಾಲಕ್ಕೆ ಠಾಣೆಯಿಂದ ಒದಗಿಸಿದ ವಾಯ್ಸ್ ರೆಕಾರ್ಡರ್ ನೀಡಿ ರೆಕಾರ್ಡಿಂಗ್ ಮಾಡಿಕೊಳ್ಳಲು ದೂರುದಾರರಿಗೆ ಈ ಮೊದಲೇ ತಿಳಿಸಿದ್ದು ಅದರ ಬಗ್ಗೆ ವಿಚಾರಿಸಿದಾಗ ದೂರುದಾರರು ತಾನು ಅವಸರದಲ್ಲಿ ವಾಯ್ಸ್ ರೆಕಾರ್ಡಿಂಗ್ ಆನ್ ಮಾಡುವುದು ಗೊತ್ತಾಗದೇ ಇದ್ದುದ್ದರಿಂದ ಹಾಗೇ ಇಟ್ಟುಕೊಂಡಿದ್ದೆ ಎಂದು ಹೇಳಿ ಹಾಜರುಪಡಿಸಿದ್ದನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಯಾವುದೇ ಸಂಭಾಷಣೆ ರೆಕಾರ್ಡ್ ಆಗಿರುವುದಿಲ್ಲ.

v. ಎದುರುದಾರರು ತಮ್ಮ ಸಮಜಾಯಿಸಿಯನ್ನು ದಿನಾಂಕ 11/08/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಸಿಯನ್ನು

ಪರಿಶೀಲಿಸಲಾಗಿ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಸಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

3) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ದೂರುದಾರರ ತಾಯಿಯ ಕೃಷಿ ಕಾರ್ಮಿಕ ಪ್ರಮಾಣಪತ್ರ ಕೊಡಲು 30,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು 5,000/- ರೂ. ಹಣವನ್ನು ಎರಡು ತಿಂಗಳ ಮೊದಲೇ ಪಡೆದುಕೊಂಡಿದ್ದು ನಂತರ ರೂ. 5,000/- ಹಣವನ್ನು ಪಡೆದುಕೊಂಡಿರುತ್ತಾರೆ. ಇನ್ನುಳಿದ ರೂ. 20,000/- ಗಳನ್ನು ದಿ: 18/11/2017 ರಂದು ದೂರುದಾರರಿಂದ ಬೇಡಿ ಪಡೆದುಕೊಂಡಿದ್ದು, ತನ್ಮೂಲಕ ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯದಲ್ಲಿ ಶ್ರದ್ದೇ ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii)ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

4) ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಮೆಹಬೂಬ್ ಹುಸೇನ್ ತಂದೆ ಮಕ್ಬುಲ್, ಗ್ರಾಮ ಲೆಕ್ಕಾಧಿಕಾರಿ, ಬಾಗಲವಾಡ ಪ್ರಭಾರ ಮಲ್ಲದಗುಡ್ಡ ಗ್ರಾಮ ಪಂಚಾಯತ್, ತಾ: ಜಿ: ರಾಯಚೂರು ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

5) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

5/10/21

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.